


### ಅಂತಃಕರಣ ಮೂಡಲಿ

‘ಮರಳಿ ಮರಳಿ ಬರುತಿದೆ...’ (ಜ. 02, ಕಾವ್ಯಾ ಕಡಮೆ) ಮುಖಪುಟ ಲೇಖನ ಮಾತ್ರವಲ್ಲ, ಟಿಪ್ಪಣಿಗಳು ಒಂದಕ್ಕಿಂತ ಒಂದು ಚೆಂದವಾಗಿವೆ. ಆರಂಭಿಕ ಬರಹ, ನಮ್ಮ ಬದುಕು, ಚಿಂತನೆ, ಸಾಗಬೇಕಾದ ದಿಕ್ಕಿನತ್ತ ಬೆಳಕು ಚೆಲ್ಲುವಂತಿದೆ. ಲೇಖನದ ಆಶಯದಂತೆ 2025ರಲ್ಲಿ ಜಗತ್ತು ಮಾನವೀಯಗೊಳ್ಳಲಿ ಎಂದು ಹಾರೈಸಬೇಕಿದೆ.

ಪ್ರಸ್ತುತ ಸಮಾಜದಲ್ಲಿ ಮಾನವೀಯತೆ ಮಾಯವಾಗಿದೆ. ಮನುಷ್ಯ ಮನುಷ್ಯನಾಗಿ ಉಳಿದಿಲ್ಲ. ಮಾತು ಬಾರದ ಪ್ರಾಣಿಗಳಿಗಿಂತ ಕೀಳಾಗಿದ್ದಾನೆ. ಪ್ರೀತಿ, ಸಂಬಂಧ, ಸಹಾನುಭೂತಿ, ಮನುಷ್ಯನ ಮನೋಭಾವಗಳು ಧನಾತ್ಮಕವಾಗಿ ಬದಲಾಗಬೇಕಿದೆ.

ಅಂತರಂಗದ ಅಂತಃಕರಣದಿಂದ ಎಲ್ಲರನ್ನೂ ಕಾಣಲು ನಮಗೆ ಸಾಧ್ಯವಾದರೆ ನಮ್ಮ ನಡುವಿನ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ದೊರಕೀತು. ಎಲ್ಲರಲ್ಲೂ ಅಂತಃಕರಣ ಒಡಮೂಡಲಿ.

—ಆರ್.ಎಸ್. ಮಲ್ಲಾರಿ ರಾವ್, ಬೆಂಗಳೂರು

### ನವ ಸಮಾಜದ ಆಶಯ

ಮುಖಪುಟ ಲೇಖನ ಸುಂದರವಾಗಿದೆ. ಹೊಸ ವರ್ಷದ ಆಶಯಗಳೂ ಅರ್ಥಗರ್ಭಿತವಾಗಿವೆ. ಪರಿಸರ, ಸಮಾಜದ ಕುರಿತಂತೆ ಎಲ್ಲರೂ ಯೋಚಿಸಬೇಕಿದೆ ಎಂಬುದನ್ನು ಟಿಪ್ಪಣಿಗಳು ಮನದಟ್ಟು ಮಾಡಿವೆ.

— ಚೇತನ್ ಎನ್., ಹಾಸನ

### ಭರವಸೆ, ನಿರೀಕ್ಷೆಗಳ ಮಹಾಪೂರ

ಮುಖಪುಟ ಲೇಖನದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು ಹಾಗೂ ವೃತ್ತಿಪರರು ಹೊಸ ವರ್ಷದ ನಿರೀಕ್ಷೆ, ಆಸೆ, ಭರವಸೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿರುವುದು ಸೂಕ್ತವಾಗಿದೆ. ಈ ವರ್ಷ ಆರೋಗ್ಯ, ಶಾಂತಿ, ನೆಮ್ಮದಿ ನೆಲೆಸಲಿ ಹಾಗೂ ಪ್ರಕೃತಿ ವಿಕೋಪ ಸಂಭವಿಸದೇ ಇರಲಿ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಮುನ್ನಡೆಯೋಣ

ಹೊಸ ವರ್ಷಕ್ಕೆ ಒಳ್ಳೆಯ ಟಿಪ್ಪಣಿಗಳ ಮುಖಾಂತರ ಜಾಗೃತಿ ಮೂಡಿಸಿದ ಲೇಖನ. ಟಿಪ್ಪಣಿಗಳು ಉಪಯುಕ್ತವಾಗಿವೆ. ಇವನ್ನು ಜೀವನದಲ್ಲಿ ಅಳವಡಿಸಿಕೊಂಡು ಬುದ್ಧಿವಂತರಾಗಿ ಆರೋಗ್ಯವಂತರಾಗಿ ಮುನ್ನಡೆಯೋಣ...

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

### ಚಿಂತನಶೀಲ ಲೇಖನಗಳು

2025 ಹೊಸ ವರ್ಷದ ಸ್ವಾಗತವನ್ನು ಕ್ರಿಯಾತ್ಮಕ ಹಾಗೂ ಚಿಂತನಶೀಲ ಲೇಖನಗಳಿಂದ ಮಾಡಿರುವುದು ಮೆಚ್ಚುವಂತಹದ್ದು. ಎಲ್ಲಾ ಲೇಖನಗಳೂ ಸ್ತುತ್ಯಾರ್ಹ. ಲೇಖನಗಳ ವಿನ್ಯಾಸವೂ ಬಹು ಸುಂದರ.

—ಲಕ್ಷ್ಮಣ್ ಗೂರ್ಲಕಟ್ಟೆ, ಮೈಸೂರು

### ಪರಿಸರ ಸಂರಕ್ಷಣೆ; ಮಾದರಿ ನಡೆ

‘ಸತ್ತು ಬದುಕಿತು ಬಿಳಿ ಮುತ್ತುಗ’ (ಜ. 02, ವಿನು ಗಂಗೆ) ಲೇಖನ ಪ್ರಕೃತಿಯೊಂದಿಗೆ ಮಾನವ ಬದುಕಬೇಕಾದ ಮಾದರಿ ನಡೆಯಂತಿದೆ.

‘ಬದುಕಿ, ಬದುಕಲು ಬಿಡಿ’ ಎಂಬ ಪರಿಸರದ ಪಾಠವನ್ನು ಲೇಖಕಿ ನಾಟಾ ವ್ಯಾಪಾರಿ ತನ್ನ ಸಂಬಂಧಿ ಈರಣ್ಣನಿಗೆ ಕಲಿಸಿ, ಪರಿಸರ ಸಂರಕ್ಷಣೆಯಲ್ಲಿ ಅವರನ್ನೂ ಕೈ ಜೋಡಿಸುವಂತೆ ಮಾಡಿದ್ದು ಅಭಿನಂದನೀಯ.

—ಎಸ್. ವಿಶ್ವನಾಥ ಐನಹಳ್ಳಿ, ಮೈಸೂರು

### ಮನಸೂರೆಗೊಂಡ ಲೇಖನ

ಅಚ್ಚುಕಟ್ಟಾದ ನಿರೂಪಣೆಯೊಂದಿಗೆ ಮನಸೂರೆಗೊಂಡಿತು ಬರಹ. ಮತ್ತಷ್ಟು ಬಿಗಡಾಯಿಸಬಹುದಾಗಿದ್ದ ಪರಿಸ್ಥಿತಿಯಲ್ಲಿ ಸಂಯಮವನ್ನು ತಂದುಕೊಂಡು ಸಂಬಂಧ ಉಳಿಸಿಕೊಂಡಿದ್ದು ಹಾಗೂ ಬಿಳಿ ಮುತ್ತುಗವು ಮರುಹುಟ್ಟು ಪಡೆದದ್ದು ಸಕಾರಾತ್ಮಕ ಮನೋಭಾವದ ಪರಿಣಾಮವನ್ನು ಎತ್ತಿತೋರಿಸುತ್ತದೆ.

—ಎಂ. ಶಂಕರ್, ಬೆಂಗಳೂರು

### ಮುತ್ತುಗದ ಮಹತ್ವ

ಬಿಳಿ ಮುತ್ತುಗ ಮರದ ಮಹತ್ವದ ತಿಳಿಸಿ ಕೊಟ್ಟಿದೆ, ಉತ್ತಮ ಬರಹ.

—ಕೆ. ಚಂದ್ರಪ್ಪ, ಆನೇಕಲ್

### ಆಪ್ತ ಬರಹ

‘ಸೆಲೆಬ್ರಿಟಿ’ ಅಂಕಣದಲ್ಲಿ ಬರುವ ವ್ಯಕ್ತಿಗಳ ಜೀವನ, ಅವರ ಸಾಧನೆಗಳನ್ನೊಳಗೊಂಡ ಮಾಹಿತಿ ಮನಮುಟ್ಟುವಂತಿರುತ್ತದೆ. ಬರಹದ ಶೈಲಿ ಬಹಳ ಆಪ್ತವಾಗಿರುತ್ತದೆ.

—ಶಕುಂತಲಾ ಹಿರೇಮಠ

### ಅವಲೋಕನ ಆಗಬೇಕಿದೆ



‘ತಲೆಗೆ ಬಿದ್ದ ಏಟು’ (ಜ. 02, ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ) ಕಥೆ ಈಗಿನ ಜನರ ಮನಸ್ಸಿಗೆ ಹಿಡಿದ ಕನ್ನಡಿಯಂತಿದೆ. ಕೆಲವು ವಿಷಯಗಳ ಬಗ್ಗೆ ನಾವು ಅವಲೋಕನ ಮಾಡಿಕೊಂಡಲ್ಲಿ ಸಮಾಜದ ಅಸ್ವಸ್ಥತೆ ಸ್ವಲ್ಪವಾದರೂ ಸರಿ ಹೋಗಬಹುದೇನೋ.

—ಸುಜಾತ ಮಂಜುನಾಥ್, ಬೆಂಗಳೂರು

### ಅರ್ಥಗರ್ಭಿತ ಕಥೆ

ಕಥೆ ಸರಳವಾಗಿ ಕಂಡರೂ ಅರ್ಥಗರ್ಭಿತವಾಗಿದೆ. ಯಾರ ಮಾತನ್ನೋ ಅತಿಯಾಗಿ ಹಚ್ಚಿಕೊಂಡು ತಮ್ಮ ಜೀವನವನ್ನು ಮರೆತವರಿಗೂ ತಲೆಗೆ ಪೆಟ್ಟು ಕೊಡುತ್ತದೆ. ಎಂತಹುದೇ ಕಷ್ಟ ಬರಲಿ, ಸೌಹಾರ್ದದಿಂದ ಇದ್ದರೆ ಎಲ್ಲರ ಬಾಳೂ ಸುಗಮವಾಗಿರುತ್ತದೆ ಎಂದು ಸಾರಿ ಹೇಳಿದೆ.

—ಉಷಾ ರಾಜಾರಾವ್

### ಸೇವೆ ಸ್ಮರಣೀಯ

‘ಹಸಿರೆಲೆಯಲಿ ಅಡಗಿದ ತುಳಸಿ’ (ಜ. 02, ಅಕ್ಷತಾ ಕೃಷ್ಣಮೂರ್ತಿ) ಲೇಖನ ಸಕಾಲಿಕವಾಗಿದೆ. ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ ಹೊನ್ನಳ್ಳಿ ನರ್ಸರಿಯಲ್ಲಿ ಲಕ್ಷಾಂತರ ಬೀಜಗಳನ್ನು ಕಾಡಿನಿಂದ ತಂದು ಸಂಸ್ಕರಿಸಿ, ಪೋಷಿಸಿ ನೆಡುವುದರಲ್ಲಿಯೇ ತನ್ನ ಜೀವಮಾನ ಸವೆಸಿದ ತುಳಸಿ ಗೌಡರ ಸೇವೆ ಸ್ಮರಣೀಯ.

ಕಾಡನ್ನು ಬೆಳೆಸುವ ಅವರ ಪ್ರೀತಿ, ಕಾಳಜಿ ನಮ್ಮೆಲ್ಲರಲ್ಲೂ ಇದ್ದಿದ್ದರೆ ವಾತಾವರಣದ ವೈಪರೀತ್ಯಗಳಿಂದ ಪರಿಸರವನ್ನು ಕಾಪಾಡಿ ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಕೊಡುಗೆ ನೀಡಬಹುದಿತ್ತು ಅಂತನಿಸಿತು. ಸರ್ಕಾರ ತುಳಸಿ ಗೌಡರ ಹೆಸರಲ್ಲಿ ‘ತುಳಸಿ ವನ’ ನಿರ್ಮಿಸಲಿ.

— ಫಾಲ್ಗುಣ ಗೌಡ ಅಚವೆ

### ಉದಯಾಸ್ತ

ಹಿಂದಿನ ವರ್ಷದಲ್ಲಿ ಎರಡು ನಕ್ಷತ್ರಗಳು ಉದುರಿದವು! ಹೊಸ ವರ್ಷದಲ್ಲಿ ಎಷ್ಟು ಉದಯಿಸುತ್ತವೋ ತಿಳಿಯದು. (ಅರಿವಿಗೆ ಬರುತ್ತದೆ, ಅಸ್ತ; ಉದಯವಾದರೂ ಅಜ್ಞಾತ!)

—ಸಿಪಿಕೆ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in